ಕನ್ನಡ ಸಾಹಿತ್ಯ ಸಂದರ್ಭ ನಿರ್ಣಾಯಕ ಹೊರಳುಘಟ್ಟದಲ್ಲಿದೆ. ಹೊಸ ಬರಹಗಾರರು ಹೆಚ್ಚು ಹೆಚ್ಚು ಇನ್‌ಕ್ಲೂಸಿವ್ ಆಗುತ್ತಿದ್ದಾರೆ, ಈ ಎಲ್ಲರೂ ಮಹಿಳಾ ಸಂವೇದನೆಯನ್ನು ಒಳಗೊಳ್ಳುತ್ತಿರುವುದು ಇದರ ಪ್ರಧಾನ ಅಂಶ. ಇದು ವಿಮರ್ಶೆಯ ಮಟ್ಟಿಗೆ ಮಾತ್ರ ಅಲ್ಲ. ಒಟ್ಟು ಎಲ್ಲಾ ಪ್ರಕಾರಗಳಲ್ಲೂ ಕೂಡ ಇದು ನಡೀತಾ ಇದೆ ಅಂತ ಅನ್ಸುತ್ತೆ. ಅಮರೇಶ ನುಗಡೋಣಿ, ಲೋಕೇಶ್ ಅಗಸನಕಟ್ಟೆ, ರುದ್ರೇಶ್ವರಸ್ವಾಮಿ ಮತ್ತು ರಮೇಶ್ ಅರೋಲಿ ಅವರ ಬರಹಗಳು ತಕ್ಷಣಕ್ಕೆ ನೆನಪಾಗುತ್ತಿವೆ. ಇವು ಸ್ತ್ರೀವಾದವನ್ನು ಅಪ್ರಾಪ್ರಿಯೇಟ್ ಮಾಡುತ್ತಿದೆ ಎಂದೇ ನಾನು ತಿಳಿಯುತ್ತೇನೆ. ಈ ಸಂವೇದನೆಯ ಹೆಗ್ಗಳಿಕೆಯನ್ನು ಸ್ತ್ರೀವಾದಕ್ಕೆ ಕೊಡಬೇಕು ಎಂದಲ್ಲ ನಾನು ಹೇಳುತ್ತಿರುವುದು. ಸ್ತ್ರೀಸಂವೇದನೆಯ ಕೇಂದ್ರಕ್ಕೆ ಇವರೆಲ್ಲ ಸ್ಪಂದಿಸುತ್ತಿರುವ ಬಗೆಯೇ ಸ್ತ್ರೀವಾದದ ಅಗತ್ಯ ಮತ್ತು ಮಹತ್ವವನ್ನು ಎತ್ತಿ ಹಿಡಿಯುತ್ತಿದೆ.



◆ ಬಸವಣ್ಣ ಹೆಣ್ಣುಮಕ್ಕಳ ವಿಷಯದಲ್ಲಿ ಬಹಳ ಪುರೋಗಾಮಿ ಚಿಂತನೆ ಹೊಂದಿದ್ದನ್ನು ಹೇಳುವ ನೀವು ಇಡೀ ವಚನ ಚಳವಳಿಯನ್ನು ಹೆಣ್ಣುಮಕ್ಕಳ ಸಮಾನತೆಯ ಕನಸು ನನಸಾದ ಕಾಲವದು ಎನ್ನುವ ಅರ್ಥದಲ್ಲೂ ನೋಡುತ್ತೀರಿ. ವಚನ ಚಳವಳಿಯ ನಾಯಕನೇ ಪುರೋಗಾಮಿಯಾಗಿದ್ದಲ್ಲಿ ವಚನಕಾರ್ತಿಯರು ತಮ್ಮ ಅಸ್ಮಿತೆಯನ್ನು ತಾವೇ ಸಾಧಿಸಿದರೆ? ಅವರದು ಸ್ವಯಂಭು ವ್ಯಕ್ತಿತ್ವವೇ? ಮತ್ತೂ ಅಚ್ಚರಿಯೆಂದರೆ ತಮ್ಮ ವಚನಗಳಲ್ಲಿ ಹಲವಾರು ವಚನಕಾರ್ತಿಯರು ಅಕ್ಕನನ್ನು ಸೇರಿದಂತೆ ಬಸವಣ್ಣನನ್ನು ತಮ್ಮ ಆಪ್ತಬಂಧು ಎಂಬಂತೆ ಹಾಡಿ ಹೊಗಳಿದ್ದಾರಲ್ಲ, ಅದು ಹೇಗೆ ಸಾಧ್ಯ?

ಬಸವಣ್ಣನ ಬಗ್ಗೆ ತುಂಬಾ ಗೌರವ ಇದೆ. ಆದರೆ ಬಸವಣ್ಣ ದಲಿತರ ಪ್ರಶ್ನೇನ ನಿಭಾಯಿಸೋದಕ್ಕೂ ಹೆಣ್ಣಿನ ಪ್ರಶ್ನೆಯನ್ನು